


International Journal of Kannada Research
www.kannadajournal.com

**ISSN: 2454–5813**
IJSR 2017; 3(1): 137-140
© 2017 IJKS
www.kannadajournal.com
Received: 22-11-2016
Accepted: 23-12-2016

**ಮಹೇಶ ಎಂ ಟಿ**
ಸಂಶೋಧನ ವಿದ್ಯಾರ್ಥಿ ಕನ್ನಡ
ಸ್ನಾತಕೋತ್ತರ ಕೇಂದ್ರ
ಹೇಮಗಂಗೋತ್ರಿ, ಹಾಸನ

**ಮಾರ್ಗದರ್ಶಕರು**
*ಡಾ.ಎಂ ಶಂಕರ* ಸಹ
ಪ್ರಾಧ್ಯಾಪಕರು. ಕನ್ನಡ
ಸ್ನಾತಕೋತ್ತರಕೇಂದ್ರ
ಹೇಮಗಂಗೋತ್ರಿ. ಹಾಸನ

# ಕುಮಾರನಿಜಗುಣರ ಸಾಹಿತ್ಯಕೃತಿಗಳು–*ಒಂದು ಕಿರುನೋಟ*

**ಮಹೇಶ ಎಂ ಟಿ, ಸಂಶೋಧನ ವಿದ್ಯಾರ್ಥಿ**

ಭೋಗಲಾಲಸೆಯೇ ತುಂಬಿ ತುಳುಕುತ್ತಿರುವ ಇಂದಿನ ಆಧುನಿಕ ಯುಗದಲ್ಲಿ ವೈರಾಗ್ಯದ ಶೀಖರವನ್ನೇರಿದ ಮಹಾನುಭಾವರನ್ನು ಕಂಡಾಗ ತಲೆಬಾಗುತ್ತೇವೆ. ಇಂದ್ರಿಯ ಸುಖವೇ ಪರಮ ಸುಖವೆಂದು ಭಾವಿಸಿರುವ ಈಗ ಇಂತಹವರನ್ನು ಕಂಡಾಗ ಮೂಕವಿಸ್ಮಿತರಾಗುತ್ತೇವೆ. ಇಂದ್ರಿಯ ಸುಖಕ್ಕೆ ಮನ್ನಣೆ ಕೊಡುವ ಇಂದಿನ ಸಮಾಜದಲ್ಲಿ ಅದನ್ನು ತೃಣ ಸಮಾನವೆಂದು ಹೇಳಿ ವೈರಾಗ್ಯವನ್ನು ತಾಳಿ ಜನಮಾನಸವನ್ನು ಸೂರೆಗೊಂಡವರಿದ್ದಾರೆ. ಅಂತಹ ಘನವೆತ್ತ ವೈರಾಗ್ಯ ಮೂರ್ತಿಗಳಲ್ಲಿ ಚಾಮರಾಜ ನಗರ ಜಿಲ್ಲೆಯ, ಕೊಳ್ಳೇಗಾಲ ತಾಲ್ಲೂಕಿನ ಚಿಲುಕವಾಡಿ ಗ್ರಾಮದ ಶ್ರೀ ಶಂಭುಲಿಂಗಕ್ಷೇತ್ರದ ನಿಜಗುಣಾನುಭವ ಮಂಟಪದ ಅಧ್ಯಕ್ಷರಾದ ಶ್ರೀ ಕುಮಾರನಿಜಗುಣರು ಒಬ್ಬರು. *ಇವರು ಛಂದೋವಿಲಾಸವೈಭವ, ಶ್ರೀ ಶಿವಕುಮಾರಚರಿತಂ, ವೃತ್ತವಿಲಾಸವೈಭವ, ಛಂದಮೆ ಚಂದಂಆನಂದಂ, ನಿಜಗುಣಕಥಾಮೃತ, ಬೋಳುಬಸವನಬೊಂತೆ, ಭಿಕ್ಷ, ನಿರೀಕ್ಷೆ, ಶ್ರೀಶಿವರಾತ್ರಿರಾಜೇಂದ್ರಕಥನ, ಶಿವನ್ಪಂಚವಿಂಶತಿಲೀಲೆಗಳು, ಪಾರ್ವತೀಪ್ರಣಯಕಲಹಂ, ಮೇಘಸಂದೇಶ, ನಿಜಗುಣಸ್ತೋತ್ರಮಾಲೆ, ಗಣಾಕ್ಷರವೃತ್ತಶತಕ, ಕಥಾಸಂಗಮ, ಹೀಗೆ ಹತ್ತುಹಲವು ಕೃತಿಗಳನ್ನು ರಚಿಸಿದ್ದಾರೆ.* ಇವರ ಕಾವ್ಯಗಳ ವಿಶೇಷವೆಂದರೆ ಗಾಂಭೀರ್ಯ ಮತ್ತು ಸೌಂದರ್ಯ. ಷಟ್ಪದಿ ಮತ್ತು ವೃತ್ತಪ್ರಕಾರದಲ್ಲಿ ಹೊಸ ಹೊಸ ಪ್ರಯೋಗಗಳನ್ನು ಮಾಡಿದ್ದಾರೆ. ಇನ್ನೊಂದು ವಿಶೇಷವೆಂದರೆ ಇವರ ವೃತ್ತಗಳು, ಷಟ್ಪದಿಗಳು, ಸರಸಸುಭಗವೂ, ಸಹಜ ಮಧುರವೂ ಆಗಿದ್ದು, ಅಡೆ–ತಡೆಯಿಲ್ಲದೇ ಪ್ರವಹಿಸುತ್ತವೆ. ಹರಿಹರನ ರಗಳೆಯ ಹರವು, ಕುಮಾರವ್ಯಾಸನ ಭಾಮಿನಿಷಟ್ಪದಿ ವೈಭವ, ಲಕ್ಷ್ಮೀಶನ ವಾರ್ಧಕಷಟ್ಪದಿ ವಿಲಾಸ ಇವೆಲ್ಲಕ್ಕೂ ಸರಿಸಮನಾದ ರಚನೆಗಳು ಶ್ರೀಕುಮಾರನಿಜಗುಣರಲ್ಲಿ ಇವೆ.ಇವರ ಕಾವ್ಯಗಳಲ್ಲಿ ವಾಗರ್ಥ ಸಂಪತ್ತು ಇದೆ. 20ನೇ ಶತಮಾನವು ವಿಶೇಷವಾಗಿ ಗದ್ಯಯುಗ ಈ ಕಾಲದಲ್ಲಿ ಕಾವ್ಯಕೂಡ ಗದ್ಯದ ನಡಿಗೆಯನ್ನು ರೂಢಿಸಿಕೊಳ್ಳಬೇಕಾಯಿತು. ಕನ್ನಡ ಕಾವ್ಯ ಹಳೆಯ ಕಟ್ಟಳೆಗಳನ್ನು ಮುರಿದು ಹೊಸ ಭಾವ, ಭಾಷೆ, ಲಯಗಳಿಂದ ಆಧುನೀಕರಣಗೊಂಡು ಮುಂದುವರಿದಾಗಲೂ ಕೆಲವರು ಮಾರ್ಗ ಸಂಪ್ರದಾಯದಲ್ಲಿಯೇ ಪದ್ಯ ರಚಿಸುತ್ತಾ ಬಂದಿದ್ದಾರೆ. ಅಂತಹವರಲ್ಲಿ ಶ್ರೀ ಕುಮಾರನಿಜಗುಣರೂ ಒಬ್ಬರು.

## ಕುಮಾರನಿಜಗುಣರ ಕಾವ್ಯಗಳು

***ನಿರೀಕ್ಷೆ*** ಇದು ಶ್ರೀ ಕುಮಾರನಿಜಗುಣರ ಮೊದಲ ಕೃತಿ. 1970ರಲ್ಲಿ ಅವರು ತಮ್ಮ ಪೂರ್ವಾಶ್ರಮ ಕಾಲದಲ್ಲಿ ಬರೆದು ಪಿ. ಬಸವಣ್ಣ ಎಂಬ ತಮ್ಮ ಹಿಂದಿನ ಹೆಸರಿನಲ್ಲಿಯೇ ಪ್ರಕಟಿಸಿರುವ ಲೌಕಿಕ ಕೃತಿ. ದಾಂಪತ್ಯದ ಸರಸ–ವಿರಸ ಈ ಕೃತಿಯ ವಸ್ತು. ಇದು ತನ್ನ ಪ್ರೀತಿಗೆ ಪಾತ್ರಳಾದ ಪತ್ನಿಯನ್ನು ಕಳೆದುಕೊಂಡು ಅದೇ ದುಖಃದಲ್ಲಿ ರಚಿಸಿದ ಕೃತಿಯಾಗಿದೆ. ಗತಿಸಿದ ತನ್ನ ಮಡದಿಯನ್ನು ನೆನೆದುಕೊಂಡು, ನನ್ನ ಮಡದಿ ಚೊಚ್ಚಲ ಮಗುವಿನ ಬಾಣಂತನಕ್ಕಾಗಿ ಹೋಗಿದ್ದಾಳೆಂದುಕೊಂಡು ಪತ್ನಿಯ ಬರುವಿಕೆಯ ನಿರೀಕ್ಷೆಯಲ್ಲಿ ಕವಿ ಮುಳುಗಿದ್ದಾರೆಂಬುದು ಈ ಕೃತಿಯಲ್ಲಿ ವ್ಯಕ್ತವಾಗಿದೆ. ಈ ಕೃತಿ ರಚನೆಯ ಹಿಂದೆ ಕವಿಯ ವೈಯಕ್ತಿತ್ವ ಜೀವನದ ದುರಂತವಿದೆ. ಇದೊಂದು ದುರಂತ ಕಾವ್ಯವೂ ಹೌದು. ಇಲ್ಲಿ ಶೋಕಭಾವ ಪ್ರಧಾನವಾಗಿದ್ದು, ಶೋಕಗೀತೆಯ ಲಕ್ಷಣವನ್ನೊಂದಿದೆ. ಈ ಪದ್ಯಗಳಲ್ಲಿ ಅಲಂಕಾರವಿದೆ, ಷಟ್ಪದಿಗಳಿವೆ, ಚಿತ್ರಕವಿತ್ವವಿದೆ. ಅಲ್ಲದೆ ಪ್ರಾಸಗಳನ್ನೊಂದಿದ್ದು ಹಾಡುಗಬ್ಬವಾಗಿದೆ. ಮಾತ್ರಾಗಣದ ನಡಿಗೆ ಮತ್ತು ನಿಯತ ಆದಿಪ್ರಾಸದಿಂದೊಡಗೂಡಿದ ಪಲ್ಲವಿ ಮತ್ತು ಚರಣಗಳಿವೆ, ಕಂದಗಳಿವೆ, ವೃತ್ತಗಳಿವೆ. ಅಪರೂಪದ ಅಂಶಗಣಾನ್ವಿತ ವಿಷ್ಣು ರಗಳೆಗಳಿವೆ.

**Correspondence**
***ಡಾ.ಎಂ ಶಂಕರ ಸಹ***
ಪ್ರಾಧ್ಯಾಪಕರು. ಕನ್ನಡ
ಸ್ನಾತಕೋತ್ತರಕೇಂದ್ರ
ಹೇಮಗಂಗೋತ್ರಿ. ಹಾಸನ

ಇಷ್ಟೆಲ್ಲಾ ಮಹತ್ವಗಳನ್ನು, ವಿಶೇಷತೆಗಳನ್ನು ಚಮತ್ಕಾರ ಚಿತ್ರಕಾವ್ಯಗಳನ್ನು ಹೊಂದಿದ ಕುಮಾರನಿಜಗುಣರ ಈ ಕೃತಿ ಅವರ ಮೊದಲಿನ ಕಾವ್ಯರಚನೆ, ಆಸಕ್ತಿ, ಶ್ರದ್ಧೆ, ಶ್ರಮ ಮತ್ತು ಮನೋಧರ್ಮಗಳನ್ನು ತಿಳಿಸುತ್ತಿದ್ದು ಕವಿಯ ಭಾವದ ತೀವ್ರತೆ ಸಹೃದಯರ ಹೃದಯಕ್ಕೆ ತಟ್ಟುವಂತಿದೆ.

***ಭಿಕ್ಷ*** (1980) ಇದು ಪಿ. ಬಸವಣ್ಣನವರು ವಿರಕ್ತರಾಗಿ ಶಂಭುಲಿಂಗನ ಬೆಟ್ಟಕ್ಕೆ ಬಂದ ಕೆಲದಿನಗಳಲ್ಲಿಯೇ ರಚಿಸಿದ ಕವನ ಸಂಕಲನವಾಗಿದೆ. ಈ ಕವನ ಸಂಕಲನದಲ್ಲಿ ಸಿದ್ಧಲಿಂಗ ಯತಿಗಳು, ಸಿದ್ಧವೀರಾರ್ಯರು, ಶಿವಕುಮಾರಸ್ವಾಮಿಗಳು ಹಾಗೂ ಶಿವರಾತ್ರಿ ರಾಜೇಂದ್ರರು ಮೊದಲಾದ ಗುರುವರೇಣ್ಯರನ್ನು ಕುರಿತ ಹಲವು ಪದ್ಯಗಳಿವೆ. ಶ್ರೀಮನ್ನಿಜಗುಣರನ್ನು ಕುರಿತ "ಶ್ರೀಶಂಭುಸಾಹಸ್ರಿ"ಯಂತಹ ಹಲವು ಪದ್ಯ ರಚನೆಗಳಿವೆ. *ಭಿಕ್ಷ* ಕವನ ಸಂಕಲನವು ಒಂದು ಭಕ್ತಿ ಕಾವ್ಯ ಅಥವಾ ದರ್ಶನ ಕಾವ್ಯ ಪ್ರಕಾರಕ್ಕೆ ಸೇರಿದ್ದಾಗಿದೆ. ದರ್ಶನ ಮತ್ತು ಕಾವ್ಯತ್ವ ಎರಡೂ ಸಮಸಮವಾಗಿ ಮೇಳೈಸಿವೆ. ಇಲ್ಲಿನ ಪರಮಾರ್ಥ ದರ್ಶನ ಮತ್ತು ಕಾವ್ಯ ಈ ಎರಡರಲ್ಲಿ ಶ್ರೇಷ್ಠ ಮಟ್ಟದ ಸಾಂಗತ್ಯವನ್ನು ಸಾಧಿಸಿರುವುದು ಶ್ರೀ ಕುಮಾರನಿಜಗುಣರ ವೈಶಿಷ್ಟ್ಯ ಇವರ ಛಂದೋನಿಷ್ಠೆ, ಭಾಷಾಪ್ರಭುತ್ವ, ಸ್ವಂತಿಕೆ, ಸೃಜನಶಿಲತೆ, ಹೊಸತನ, ಶೈಲಿಯಸುಭಗತೆ, ನುಡಿಗಟ್ಟಿನ ಚಲುವು, ಕಲ್ಪನಾಪ್ರೌಢಿಮೆ ಎಲ್ಲವೂ ಒಂದಕ್ಕೊಂದು ಪೂರಕವಾಗಿ ಅವರ ಕವನಗಳಿಗೆ ಪುಷ್ಟಿಯನ್ನು ಪಕ್ವತೆಯನ್ನು ನೀಡಿವೆ. ಭಕ್ತಿಪ್ರಧಾನವಾದ ಈ ಕಾವ್ಯದಲ್ಲಿ ದ್ವಿಪದಿ, ಚೌಪದಿ, ಷಟ್ಪದಿ ಪ್ರಕಾರಗಳಲ್ಲಿ ರಚನೆಯಾಗಿರುವ ಇಲ್ಲಿನ ಕವನಗಳಲ್ಲಿ ದ್ವಿತೀಯಾಕ್ಷರ ಪ್ರಾಸ ಮತ್ತು ಅಂತ್ಯಪ್ರಾಸಗಳು ಸಾಕಷ್ಟು ಬಳಕೆಯಾಗಿವೆ. ಎದೆಯೊಳಗಿನ ಭಾವನೆಗಳನ್ನು ಹೊರಹಾಕುವಂತಹ ಪದ್ಯಗಳಿವೆ. ಪ್ರಾರ್ಥನಾಪದ್ಯಗಳು, ಜೋಗುಳಹಾಡುಗಳು, ನಿವೇದನಾ ಪದ್ಯಗಳು, ಸುಪ್ರಭಾತಗಳು, ಭಜನಾಪದಗಳು, ಗಾಯನಯೋಗ್ಯ ಪದ್ಯಗಳು,ಸಹಸ್ರನಾಮಗಳು,ಚಿತ್ರಕವನಗಳು, ಅಷ್ಟಕಗಳು, ಸ್ತೋತ್ರಗಳಿವೆ. ಅಲ್ಲದೆ ವಿಶೇಷವಾಗಿ 'ಅ' ಕಾರದಿಂದ 'ಹ' ಕಾರದವರೆಗೆ ಹಾಗು ಗುಣಿತಾಕ್ಷರಗಳ ಒಂದೊಂದು ಅಕ್ಷರವನ್ನು ಆರಂಭವಾಗಿಟ್ಟುಕೊಂಡು ತನ್ನ ಆರಾಧ್ಯದೈವ ಶ್ರಿ ಶಂಭುಲಿಂಗನನ್ನ ಸಹಸ್ರನಾಮಗಳಿಂದ ಹೊಗಳಿ ಬರೆದಂತಹ ಸ್ತೋತ್ರಗಳಂತಹ ರಚನೆಗಳಿವೆ.

***ಬೋಳುಬಸವನ ಬೊಂತೆ:*** ಇದು ಶ್ರೀ ಕುಮಾರನಿಜಗುಣರ ಒಂದು ಅನುಸರಣ ಕಾವ್ಯ. ಇದು ಶ್ರೀಯುತ ಡಿ.ವಿ.ಜಿ.ಯವರ *ಮಂಕುತಿಮ್ಮನ ಕಗ್ಗದ* ಅನುಸರಣ ಕಾವ್ಯವಾಗಿದೆ. ಕಾವ್ಯ ಲಕ್ಷಣಗಳ ಮೂಲಭೂತ ಅಂಶಗಳನ್ನೆಲ್ಲಾ ಮೈಗೂಡಿಸಿಕೊಂಡು, ಅನುಭವ ಪ್ರಾಮಾಣ್ಯವನ್ನು ಹೊಂದಿರುವ ಒಂದು ಅನರ್ಘ್ಯ ಕೃತಿ ರತ್ನವಾಗಿದೆ. ಇದೊಂದು ಜೀವನ ಸೌಂದರ್ಯ ದರ್ಶನ ಕಾವ್ಯವಾಗಿದೆ. ಇಲ್ಲಿ *ಬೊಂತೆ* ಎಂದರೆ *ಸಾವಿರಸೊಲ್ಲುಗಳ ಸುಂದರಕಟ್ಟು* ಎಂದರ್ಥ. ಇಲ್ಲಿ ಒಂದುಸಾವಿರ ಕನ್ನಡ ಚೌಪದಿಗಳಿವೆ. *ಶ್ರೀ ತೋಂಟದ ಸಿದ್ಧಲಿಂಗೇಶ್ವರರ* ಶಿಷ್ಯರಾದ ಮಹಾನುಭಾವಿ *ಶ್ರೀ ಬೋಳುಬಸವಾರ್ಯರ* ಸ್ಮರಣಾರ್ಥವಾಗಿ ಕುಮಾರನಿಜಗುಣರ ಪ್ರತಿ ಪದ್ಯವೂ *ಬೋಳುಬಸವ* ಎಂಬ ಅಂಕಿತದಲ್ಲಿ ಮುಗಿಯುತ್ತವೆ. ಒಂದೊಂದು ಪದ್ಯದಲ್ಲಿ ತೀವ್ರವಾದ ಸಂವೇದನೆ ಜನರಿಗೆ ಹಿತವೆನಿಸುವ ಕಳಕಳಿಯು ಎದ್ದು ಕಾಣುತ್ತದೆ. ಈ ಪದ್ಯಗಳು ಹಾಡುವುದಕ್ಕೂ, ನೆನಪಿಡುವುದಕ್ಕೂ ಅನುಕೂಲಕರವಾಗಿದ್ದು ಲಲಿತವಾದ ಧಾಟಿ ಓದುಗರ ಮನಸೆಳೆಯುತ್ತದೆ. *ಮಂಕುತಿಮ್ಮನಕಗ್ಗ ಕನ್ನಡದಭಗವದ್ಗೀತೆ* ಎಂದು ಪ್ರಖ್ಯಾತಿಯಾದ ಇದು 1943 ರಲ್ಲಿ ರಚಿತವಾದ ಮಾನ್ಯ ಡಿ.ವಿ. ಗುಂಡಪ್ಪನವರ ಮೇರುಕೃತಿ. ಈ ಕೃತಿಯನ್ನು ಅನುಕರಿಸಿದವರೆಷ್ಟು ಹೆಚ್ಚಾಗಿರುವರೋ ಅನುಸರಿಸಿ ಗೆದ್ದವರು ಅಷ್ಟು ಜನರಿಲ್ಲ. ಇಂತಹ ವಿರಳರಲ್ಲಿ ಈ ಅಧ್ಯಯನದ ಕೇಂದ್ರ ಬಿಂದು ಕವಿ ಕುಮಾರನಿಜಗುಣರು ಪ್ರಮುಖರು. ಪ್ರಸ್ತುತ ಕುಮಾರನಿಜಗುಣರು ರಚಿಸಿರುವ ಬೋಳುಬಸವನಬೊಂತೆ ಎಂಬುದು ಮಾನ್ಯ ಡಿ.ವಿ.ಜಿ. ಯವರ ಮಂಕುತಿಮ್ಮನಕಗ್ಗದ ಅನುಸರಣಕಾವ್ಯ. ಕುಮಾರನಿಜಗುಣರ ಬೋಳುಬಸವನಬೊಂತೆಯಲ್ಲಿ ಕೇವಲ ಸರ್ವಜ್ಞರಂತಹ ನೀತಿಪ್ರಧಾನ ಕವಿಗಳ ಆವೇಶದ, ಅನುಭಾವಗಳ ಮಾರ್ಗವಲ್ಲದೇ ಅವಧಾನಪೂರ್ವಕವಾದ ಕಾವ್ಯಶಿಲ್ಪಿ ನಿರ್ಮಿತಿಯೂ ಇರುವುದರಿಂದಲೇ ಇದನ್ನು ಡಿ.ವಿ.ಜಿ ಯ'ವರ ಕೃತಿಯ ಬೆಳಕಿನಲ್ಲಿ ಅವಲೋಕಿಸಬೇಕಾಗಿದೆ.

**ಕುಮಾರನಿಜಗುಣರ ಷಟ್ಪದಿ ಕಾವ್ಯಗಳು**

***ಶಿವನ ಪಂಚವಿಂಶತಿಲೀಲೆಗಳು*** –ಶಿವನಿಂದ ಸುದರ್ಶನ ಚಕ್ರವನ್ನು ಪಡೆದ ಶ್ರೀಮನ್ನಾರಾಯಣನು ತನ್ನ ಚಕ್ರದಿಂದ ಭೃಗುಮುನಿಗಳ ಸತಿಯ ಶಿರವನ್ನು ಕತ್ತರಿಸಿದಾಗ ಮುನಿಗಳಿಂದ ಶಾಪಗ್ರಸ್ಥನಾದ ನಾರಾಯಣನು ಶಿವನನ್ನು ಪ್ರಾರ್ಥಿಸಿ, ಶಾಪ ವಿಮೋಚನೆಗೆ ಶಿವನ ಸಲಹೆಯಂತೆ ದಶಾವತಾರಗಳನ್ನು ಕೈಗೊಳ್ಳುವ ಒಂದು ಪುರಾಣ ಕಥನ ವಸ್ತು ಇಲ್ಲಿದೆ.

ಶಿವನು' ಇಪ್ಪತ್ತೈದು ಲೀಲೆಗಳನ್ನು ಎತ್ತಲು ಕಾರಣವಾದ ಪೌರಾಣಿಕ ಹಿನ್ನೆಲೆಯನ್ನು ಕವಿ ಇಲ್ಲಿ ಬಿಚ್ಚಿಟ್ಟಿದ್ದಾರೆ. ಚೋಳಮಂಡಲದ ಸಮೀಪದಲ್ಲಿ ಧರ್ಮವತಿ ಎಂಬ ಪುರವಿದೆ. ಇದನ್ನು ಮಹಾಭಕ್ತನಾದ ಸತ್ಯೇಂದ್ರಚೋಳ ಭೂಪಾಲನೆಂಬ ಅರಸನು ಆಳ್ವಿಕೆ ಮಾಡುತ್ತಿದ್ದಾನೆ. ಈತನ ರಾಣಿ ಅಮೃತಮತಿ. ಇವರೀರ್ವರಿಗೂ ಪುತ್ರಾಪೇಕ್ಷೆಯುಂಟಾಯಿತು. ಇದರ ಸಂತೋಷಕ್ಕೆ ತಮ್ಮ ಗುರುಗಳಾದ ಚಿದ್ಘನಶಿವಾಚಾರ್ಯರನ್ನು ಆಸ್ಥಾನಕ್ಕೆ ಆಹ್ವಾನಿಸಿ ಸತ್ಕರಿಸಿದರು. ಇದರಿಂದ ಸಂತೃಪ್ತರಾದ ಗುರುಗಳು ದಂಪತಿಗಳನ್ನು ಹರಸಿ ಮನದ ಬಯಕೆಯನ್ನು ಹೇಳಿದಲ್ಲಿ ಅನುಗ್ರಹಿಸುವುದಾಗಿ ತಿಳಿಸಿದರು. ರಾಜೇಂದ್ರನು ಪುತ್ರಾಪೇಕ್ಷೆಯ ಬದಲಿಗೆ ಗುರುಗಳ ಬಾಯಿಂದ ಪರಶಿವನ ಲೀಲೆಗಳನ್ನ ಕೇಳಿ ಕೃಥಾರ್ತರಾಗುವ ಬಯಕೆಯನ್ನು ತಿಳಿಸಿದನು. ಅದರಂತೆ ಗುರುಗಳು ದಂಪತಿಗಳಿಗೆ ಪರಶಿವನ 25 ಲೀಲೆಗಳನ್ನು ಬಹಳ ವರ್ಣನಾತ್ಮಕವಾಗಿ ವಿವರಿಸಿ ಮನಸ್ಸಂತೋಷಗೊಳಿಸಿದರು. ನಂತರ ಅಮೃತಮತಿಯನ್ನು ಹತ್ತಿರಕರೆದು ಶಿವಮಂತ್ರೋಪದೇಶ ತಿಳಿಸಿ ಅದನ್ನ ಜಪಿಸುತ್ತಿದ್ದರೆ ಸತ್ಪುತ್ರನು ಪ್ರಾಪ್ತನಾಗುವನೆಂದು ಆಶೀರ್ವದಿಸುವರು. ಅದರಂತೆ ನಡೆದುಕೊಂಡುದರ ಫಲವಾಗಿ ದಂಪತಿಗಳಿಗೆ ಸತ್ಪುತ್ರನೊಬ್ಬನು ಜನಿಸಿದನು. ಆತನೇ ರಾಜಶೇಖರ. ಹೀಗೆ ರಾಜಶೇಖರನು ಜನಿಸುವುದಕ್ಕೆ ಶಿವನ 25 ಲೀಲೆಗಳನ್ನು ಕೇಳಿ ಕೃಥಾರ್ಥರಾಗಿ, ಮಂತ್ರಜಪಿಸಿದ್ದರ ಫಲವೇ ಕಾರಣ ಎಂಬ ವಿಚಾರ ಈ ಕೃತಿಯಲ್ಲಿದೆ.

***ಪಾರ್ವತೀಪ್ರಣಯಕಲಹಂ:*** ಇದು ಕುಮಾರನಿಜಗುಣರು ರಚಿಸಿದ ಒಂದು ಶೃಂಗಾರ ಕಾವ್ಯ. ಸಂಸ್ಕೃತದ *ಸಂಧಾನಸೇವಾಪುರಾಣದ* ಅನುವಾದವಾಗಿದೆ. ವಾರ್ಧಕ ಷಟ್ಪದಿಯಲ್ಲಿ ರಚನೆಯಾಗಿದೆ. ಭಾರತೀಯ ಸಂಸ್ಕೃತಿಯ ಒಳಗೆ ಸೃಷ್ಟಿಯಾಗಿರುವ ಶಿವಪಾರ್ವತಿಯರ ದಾಂಪತ್ಯ ಅತ್ಯುಚ್ಚಮಾದರಿ, ಅರ್ಧನಾರೀಶ್ವರ ಕಲ್ಪನೆಯೊಂದೇ ಇವರ ದಾಂಪತ್ಯವನ್ನು ಪ್ರತಿಬಿಂಬಿಸುತ್ತದೆ. ಇದು ಸುಂದರವಾದ ದಾಂಪತ್ಯ ಜೀವನದಲ್ಲಿ ಹಾದುಹೋದ ಒಂದು ವಿದ್ರೋಹ ಘಟನೆಯ ಸುತ್ತ ಹೆಣೆದ ಕಥೆಯಾಗಿದೆ. ಲೋಕಹಿತಕ್ಕಾಗಿ ಶಿವನೊಮ್ಮೆ ಯಜ್ಞದೀಕ್ಷಿತನಾಗಿರಲು ದೇವತೆಗಳು

ಬಂದು ಅಸುರರನ್ನು ಮರ್ದಿಸಬೇಕೆಂದು ಪ್ರಾರ್ಥಿಸುತ್ತಾರೆ. ಅಸುರಸಂಹಾರವಾದ ಬಳಿಕ ಶಿವನು ವಿಶ್ರಮಿಸುತ್ತಿರಲು ಅಲ್ಲಿಗೆ ಬಂದ ರಂಭೆಯಲ್ಲಿ ಮೋಹಿತನಾಗುತ್ತಾನೆ. ಇತ್ತ ಶಿವನ ಅಗಲಿಕೆಯಲ್ಲಿ ಬಳಲಿ ಕಾದುಕುಪಿತಳಾದ ಪಾರ್ವತಿ ಶಿವನೇನಾದರು ಬಂದರೆ ಕೈಲಾಸಗೃಹದ ಬಾಗಿಲನ್ನೇ ತೆಗೆಯದಂತೆ ಸೇವಕಿಯರಿಗೆ ಆಜ್ಞಾಪಿಸುತ್ತಾಳೆ. ಮರಳಿದ ಶಿವ ಬಾಗಿಲಾಚೆ ನಿಂತಿರಲು ಒಳಗಿನಿಂದ ಪಾರ್ವತಿ ಯಾರೇಂದು ಪ್ರಶ್ನಿಸಿ ಆತ ಹೇಳಿದ ಹೆಸರುಗಳಿಗೆಲ್ಲಾ ಅನ್ಯಾರ್ಥವನ್ನು ಕಲ್ಪಿಸಿ ಅವನನ್ನು ಪೆಚ್ಚುಗೊಳಿಸುತ್ತಾಳೆ. ಬಳಿಕ ಬಾಗಿಲನ್ನು ತೆರೆದು ಶಿವನ ಮೈಮೇಲಿನ ರತಿಚಿಹ್ನೆಗಳನ್ನು ಗಮನಿಸಿ ಪ್ರಶ್ನಿಸುತ್ತಾ ಹೋಗಲು ಶಿವ ತನ್ನ ಚಮತ್ಕಾರದ ಮಾತುಗಳಿಂದ ಪಾರ್ವತಿಯನ್ನು ನಿರುತ್ತರಳನ್ನಾಗಿಸುತ್ತಾನೆ. ಬಳಿಕ ಅನುನಯದ ಮಾತುಗಳಿಂದಾಗಿ ಶಿವಪಾರ್ವತಿಯರು ಒಂದಾಗುತ್ತಾರೆ. ಇದಿಷ್ಟು ಕಥೆಯ ತಿರುಳು.

***ಸಂಗಮೇಶ್ವರಶತಕ:*** 1972ರಲ್ಲಿ ಪ್ರಕಟವಾದ ಈ ಕಾವ್ಯವು 108 ವಾರ್ಧಕ ಷಟ್ಪದಿಗಳಿಂದ ರಚನೆಯಾಗಿದೆ. ಇಲ್ಲಿ ಶಿವ, ಬಣವಣ್ಣ, ಚನ್ನ ಬಸವಣ್ಣ, ಪ್ರಭುದೇವ, ಅಕ್ಕಮಹಾದೇವಿ, ಮತ್ತು ಶ್ರೀ ಕುಮಾರನಿಜಗುಣರ ತಂದೆಯವರಾದ ಶ್ರೀ ಪರುವಪ್ಪನವರನ್ನು ಸುತ್ತಿಸಲಾಗಿದೆ. ಜೊತೆಗೆ ಬಸವಣ್ಣನವರ ವಚನಗಳ ವಿಶೇಷತೆಯನ್ನು ಕೊಂಡಾಡಲಾಗಿದೆ. ಕರ್ನಾಟಕದಲ್ಲಿ ಶ್ರೇಷ್ಠಸಂತನಾಗಿ, ಭಾವುಕವಿಯಾಗಿ, ಉನ್ನತವಚನಕಾರನಾಗಿ, ಸಮಾಜಸುಧಾರಕನಾಗಿ ಬಾಳಿಬೆಳಗಿದ ಭಕ್ತಿಭಂಡಾರಿ ಬಸವಣ್ಣ ನವರ ವಚನಗಳನ್ನ ಕಂಠಪಾಠ ಮಾಡಿ ಅಗತ್ಯವಿದ್ದ ಕಡೆ ಸ್ವರಪ್ರಸ್ತಾರವನ್ನು ಹಾಕಿ ಕರ್ನಾಟಕಸಂಗೀತದ ಧಾಟಿಯಲ್ಲೋ ಅಥವಾ ಉತ್ತರಾದಿಸಂಗೀತದ ಧಾಟಿಯಲ್ಲೋ ಇಂದಿಗೂ ಜನ ಹಾಡುತ್ತಿದ್ದಾರೆ, ಗಮಕದಿಂದ ವಾಚಿಸುತ್ತಿದ್ದಾರೆ. ಆದರೆ ಅವರು ಹಾಡುವಾಗ ಛಂದೋಬದ್ಧವಿಲ್ಲದ ಕಾರಣ ಹಾಡಿದರೆ ಅಲ್ಲಲ್ಲಿ ತಾಳ ತಪ್ಪುತ್ತದೆ. ಹೇಗೋ ತಾಳಕ್ಕೆ ಹೊಂದಿಸಿ ಹಾಡಿದರೆ ಸಾಹಿತ್ಯ ಕೆಡುತ್ತದೆ. ಆದ್ದರಿಂದ ಸಂಗೀತಸಾಹಿತ್ಯವೆರಡಕ್ಕೂ ಲೋಪಬಾರದಂತೆ ಇವೆರಡರ ಸಮನ್ವಯವಾದ ಗಮಕದಿಂದ ವಾಚಿಸಲು ಅನುಕೂಲವಾಗುವಂತೆ ಕುಮಾರನಿಜಗುಣರು ಬಸವಣ್ಣನವರ ವಚನಗಳನ್ನ ವಾರ್ಧಕಷಟ್ಪದಿಗೆ ಪರಿವರ್ತಿಸಿದ್ದಾರೆ. ಮೂಲತಃ ಒಂದು ಬಂಧದಲ್ಲಿರುವ ಆರು ಸಾಲಿನ ವಚನವನ್ನು ಇವರು ಸಹಜವಾಗಿಯೇ ವಾರ್ಧಕಷಟ್ಪದಿಗೆ ಅಳವಡಿಸಿದ್ದಾರೆ. ಚಿಕ್ಕದಾದ ವಚನವನ್ನು ಭಾವಕ್ಕೆ ಭಂಗ ಬರದಂತೆ ಹಿಗ್ಗಿಸಿ ಸುಂದರಷಟ್ಪದಿಯಾಗಿಸಿದ್ದಾರೆ. ದೇಶೀನಿಷ್ಠ ಸರಳಪದಗಳ ಜೋಡಣೆಯಿಂದ ಸಾಮಾನ್ಯರು ಓದಿ ಆಸ್ವಾದಿಸುವಂತೆ ಸಂತೋಷಪಡುವಂತೆ ಮಾಡಿರುವುದು ಇವುಗಳ ವಿಶೇಷ. ಬಸವಣ್ಣನವರ ಮುಕ್ತರೂಪದ ವಚನಗಳನ್ನು ಛಂದೋಬದ್ಧಷಟ್ಪದಿರೂಪದಲ್ಲಿ ಓದಿದಂತಾಗುತ್ತದೆ.

***ಮೇಘಸಂದೇಶ:*** ಇದು ಶ್ರೀ ಕುಮಾರನಿಜಗುಣರ ಒಂದು ಅನುವಾದಿತ ಕೃತಿ. ಕಾಳಿದಾಸನ *ಮೇಘಧೂತವನ್ನು* ಸಂಸ್ಕೃತದಿಂದ ಕನ್ನಡಕ್ಕೆ ವಾರ್ಧಕ ಷಟ್ಪದಿಗಳಲ್ಲಿ ಅನುವಾದಿಸಿದ್ದಾರೆ. ಕನ್ನಡ ಸಾಹಿತ್ಯಕ್ಕೆ ಷಟ್ಪದಿ ವೃತ್ತಗಳ ರಚನೆಯಲ್ಲಿ ಅಪೂರ್ವ ಕೊಡುಗೆಗಳನ್ನು ಕೊಟ್ಟ ಶ್ರೀ ಕುಮಾರನಿಜಗುಣರಿಗೆ ಷಟ್ಪದಿ ಸಿದ್ಧಿಸಿರುವುದಕ್ಕೆ ನಿದರ್ಶನವಾಗಿ ಮೇಘ ಸಂದೇಶ ಕೃತಿ ಮೂಡಿಬಂದಿದೆ. ಕನ್ನಡದಲ್ಲಿ ಕುಮಾರನಿಜಗುಣರು *ಮೇಘಸಂದೇಶ* ಎಂಬ ಷಟ್ಪದಿಕಾವ್ಯವನ್ನು ವಾರ್ಧಕ ಷಟ್ಪದಿಯಲ್ಲಿ ರಚಿಸಿದ್ದಾರೆ. ಇದು ಕಾಳಿದಾಸನ ಮೇಘದೂತ ಕಾವ್ಯದ ಅನುವಾದವಾಗಿದೆ. ಕನ್ನಡ ಪದ್ಯಾನುವಾದ ಮೇಘದೂತ ಕಾವ್ಯಗಳಲ್ಲಿ ಕೆಲವು ಅನುವಾದಕರು ಗದ್ಯದ ಪ್ರಸ್ತಾವನೆಯ ಜೊತೆಗೆ ಕಾವ್ಯಾನುವಾದಕ್ಕೂ ಮೊದಲು ಕೆಲವು ಪದ್ಯಗಳನ್ನು ಪೀಠಿಕಾರೂಪವಾಗಿ ಬರೆದಿದ್ದಾರೆ. ಅವರಲ್ಲಿ ವರಕವಿ ಬೇಂದ್ರೆ ಮತ್ತು ಕುಮಾರನಿಜಗುಣರು ಪ್ರಮುಖರು. ಉಳಿದವರು ನೇರವಾಗಿ ಕಾವ್ಯವನ್ನು ಪದ್ಯ ರೂಪದಲ್ಲಿ ಅನುವಾದಿಸಿದ್ದಾರೆ. ಅಂಬಿಕಾತನಯದತ್ತರ ಕನ್ನಡ ಮೇಘದೂತ ಹಾಗು ಕುಮಾರನಿಜಗುಣರ ಮೇಘಸಂದೇಶ ಇವುಗಳು ಸಂಸ್ಕೃತದ ಕವಿ ಕಾಳಿದಾಸ ಕವಿಯ *ಮೇಘದೂತ* ದ ಪದ್ಯಾನುವಾದಗಳಾಗಿವೆ. ಮಹಾಕವಿ ಕಾಳಿದಾಸನು ಮೇಘದೂತ ಕಾವ್ಯ ರಚನೆಗೆ *ಮಂದಾಕ್ರಾಂತವನ್ನು* ಆಯ್ಕೆಮಾಡಿಕೊಂಡಿದ್ದಾನೆ. ವರಕವಿ ಬೇಂದ್ರೆ ಯವರು ದೇಸಿ ಮೂಲದ ಹೊಸರಗಳೆಯನ್ನು ತಮ್ಮ ಮೇಘದೂತ ರಚನೆಗೆಂದೇ ಸೃಷ್ಟಿಮಾಡಿಕೊಂಡಿದ್ದಾರೆ. ಅದರಂತೆ ಇಲ್ಲಿ ಕವಿ ಕುಮಾರನಿಜಗುಣರು *ಮೇಘಸಂದೇಶ* ರಚನೆಗೆ *ವಾರ್ಧಕ* ಷಟ್ಪದಿಯನ್ನು ಬಳಸಿಕೊಂಡಿದ್ದಾರೆ.

ಇಂತಹ ಪ್ರಮುಖ ವಿಚಾರಗಳು ಈ ಕೃತಿಯಲ್ಲಿದ್ದು ಕುಮಾರನಿಜಗುಣರ ಮೇಘಸಂದೇಶ ಕೃತಿಯು ಅನುವಾದ ಕಾವ್ಯಗಳಲ್ಲಿ ಪ್ರಮುಖವಾದದ್ದಾಗಿದೆ.

***ಶ್ರೀ ಶಿವಕುಮಾರ ಚರಿತಂ:*** ಇದು ಸಂತರೂ, ಯತಿಗಳೂ, ಜಗದ್ಗುರುಗಳೂ ಆದಂತಹ ಶ್ರೀ ಸಿದ್ಧಲಿಂಗಕ್ಷೇತ್ರಾಧಿಪತಿಗಳಾಗಿರುವ ಶ್ರೀ ಶಿವಕುಮಾರ ಸ್ವಾಮಿಗಳ ದಿವ್ಯ ಜೀವನವನ್ನು ಕುರಿತ ಕಾವ್ಯ. ಇದನ್ನು ವಿವಿಧ ಷಟ್ಪದಿಗಳಲ್ಲಿ ರಚಿಸಲಾಗಿದೆ. ಒಟ್ಟು 145 ಷಟ್ಪದಿಗಳು ಇವೆ. ಖಂಡಕಾವ್ಯ ಅಥವಾ ನೀಳ್ಗವಿತೆಯನ್ನು ಹೋಲುವ ಇದನ್ನು ಶ್ರೀ ಕುಮಾರನಿಜಗುಣರು "ಕಿರುಗಬ್ಬ" ಎಂದು ಕರೆದಿದ್ದಾರೆ.

ಶ್ರೀ ಶಿವಕುಮಾರ ಸ್ವಾಮಿಗಳ ಬಾಲ್ಯ, ವಿದ್ಯಾಭ್ಯಾಸ, ಮಠಾಧೀಶರಾಗಿ ದೀಕ್ಷೆ ಸ್ವೀಕಾರ, ಶಿಕ್ಷಣ ಕ್ಷೇತ್ರದಲ್ಲಿ ಮಾಡಿದ ಕ್ರಾಂತಿ, ಸಾಮಾಜಿಕ ಸೇವೆ ಮುಂತಾದವನ್ನು ಕುರಿತು ಸಂಕ್ಷಿಪ್ತವಾಗಿ ವಿವರಿಸಿದ್ದಾರೆ. ಅಲ್ಲದೇ ಕನ್ನಡದ ವಿಶಿಷ್ಟ ಛಂದೋಬಂಧದಿಂದ ಷಟ್ಪದಿಯಲ್ಲಿ ಲಕ್ಷ್ಯ-ಲಕ್ಷಣ ಸಮೇತವಾಗಿ ವಿವಿಧ ಪ್ರಯೋಗಗಳನ್ನು ಮಾಡಿರುವುದು ಈ ಕಾವ್ಯದ ವಿಶೇಷವಾಗಿದೆ.

ಕಥನದ ರೂಪದಲ್ಲಿರುವ ಈ ಕೃತಿಯ ಅಂತ್ಯದಲ್ಲಿ ಈ ಕಥೆಯನ್ನು ಶ್ರದ್ಧೆಯಿಂದ ಕೇಳಿದವರಿಗೆ ಸುಖಸಂತೋಷಗಳು, ಧನಕನಕ, ದೀರ್ಘಾಯುಷ್ಯ ಲಭಿಸುತ್ತವೆಂದು ಹೇಳುವಂತೆ ಚಿತ್ರಿಸಿರುವುದು ವಿಶೇಷವಾಗಿದೆ.

**ಕುಮಾರನಿಜಗುಣರ ಅಕ್ಷರವೃತ್ತ ರಚನೆಗಳು**

ಶ್ರೀ ಕುಮಾರನಿಜಗುಣರಿಗೆ ಛಂದಸ್ಸಿನ ಮೇಲೆ ಅಪಾರವಾದ ಆಸಕ್ತಿ. ಅವರ ಕಾವ್ಯಗಳಲ್ಲಿ ಛಂದಸ್ಸು ಸ್ವಚ್ಛಂದವಾಗಿ ಪ್ರವಹಿಸಿವೆ. ಛಂದೋಕ್ಷೇತ್ರಕ್ಕೆ ನೂರಾರು ವಿಧದ ಅಕ್ಷರ ವೃತ್ತ ರಚನೆಗಳನ್ನು ನೀಡಿದ್ದಾರೆ.

***ವೃತ್ತವಿಲಾಸವೈಭವ:*** ಇದೊಂದು ಅಕ್ಷರ ವೃತ್ತ ರಚನೆಗಳಿಂದ ರಚಿತವಾದ ಕೃತಿಯಾಗಿದೆ. ಅಕ್ಷರಗಣಗಳ ವೃತ್ತ ವಿಲಾಸಗಳನ್ನು ಅದರಲ್ಲೂ ಇತರ ಯಾವುದೇ ಛಂದೋಗ್ರಂಥಗಳಲ್ಲಿ ಹೇಳಿರದ ಹೆಚ್ಚು ಹೆಚ್ಚು ನವೀನ ವಾಕ್ಯ ನಾಮಾಂಕಿತ ಸಮವೃತ್ತಗಳನ್ನು ಲಕ್ಷಣೋದಾಹರಣಗಳನ್ನು ಒಳಗೊಂಡಿದ್ದು ಇದು ಒಂದು ಅದ್ಭುತವಾದ, ಅಪೂರ್ವವಾದ ಛಂದೋಮಯವಾದ ಕೃತಿ. 1995 ರಲ್ಲಿ ಪ್ರಕಟವಾದ ಈ ಕೃತಿಯಲ್ಲಿ ನಾನಾ ಬಗೆಯ ಅಷ್ಟಕಗಳು, ಪಂಚಕಗಳು ಮತ್ತು ಶತಕಗಳಿವೆ. ಇವುಗಳನ್ನು

ಕುರಿತಂತೆ ಇತರ ಲೇಖಕರು ಬರೆದಿರುವ ಲೇಖನಗಳಿವೆ. ಅಷ್ಟಕಗಳು, ಪಂಚಕಗಳು, ವೃತ್ತಗಳಿಂದ ಕೂಡಿದ ಈ ಕೃತಿಯಲ್ಲಿ ಸ್ತೋತ್ರ, ಹಾರೈಕೆ, ಆಶಯ, ನೀತಿಭೋದೆ, ವ್ಯಕ್ತಿಪರಿಚಯ, ಕವಿಸಾಮರ್ಥ್ಯ ಮೊದಲಾದ ವಿಷಯಗಳನ್ನೊಳಗೊಂಡು ಛಂದಸ್ಸಿನ ಸೃಷ್ಟಿಯಿಂದ ವೈವಿಧ್ಯಮಯವಾಗಿವೆ. ಇಲ್ಲಿ ರಚಿತವಾದ ವೃತ್ತಗಳೆಲ್ಲವೂ ಕುಮಾರನಿಜಗುಣರಿಂದಲೇ ಹೊಸದಾಗಿ ಪ್ರಯೋಗಿಸಲ್ಪಟ್ಟಿವೆ. ಈ ವೃತ್ತಗಳಿಗೆಲ್ಲಾ ಹೊಸದಾಗಿ ನಾಮಕರಣವನ್ನು ಮಾಡಿ ಲಕ್ಷಣಗಳನ್ನು ತಿಳಿಸಿದ್ದಾರೆ.ಕನ್ನಡ ಸಾಹಿತ್ಯಕ್ಕೂ ಇದೊಂದು ಅಭೂತಪೂರ್ವ ಕೊಡುಗೆಯಾಗಿದೆ.

***ಗಣಾಕ್ಷರವೃತ್ತಶತಕ:*** ಇದು ಛಂದೋಸಕ್ತರಿಗೆ ಕುತೂಹಲಕಾರಿಯಾದ ವೃತ್ತಜಾತಿಗಳ ಹೊಸ ಲಕ್ಷಣಗಳ ಗ್ರಂಥ' ಇದು 100 ವೃತ್ತಗಳನ್ನು ಹೊಂದಿದ್ದು, ಎಲ್ಲಾ ವೃತ್ತಗಳು ಹೊಸದಾಗಿವೆ. ಪೂರ್ವೋಕ್ತ ಪ್ರಾಚೀನ ಹಾಗೂ ವೃತ್ತ ಕಾವ್ಯಗಳೆರಡರಲ್ಲಿಯೂ ರಚನೆಯಾಗಿದೆ. ಪ್ರತಿಯೊಂದು ವೃತ್ತವೂ ಅದಕ್ಕೊಪ್ಪುವ ಶೀರ್ಷಿಕೆಗಳನ್ನು ಹೊಂದಿರುವುದು ವಿಶೇಷ. ಇಲ್ಲಿ ಬಳಕೆಯಾಗಿರುವ 100 ವೃತ್ತಗಳು 100 ವಿಷಯಗಳನ್ನು ಹೊಂದಿದ್ದು ಗತಕಾಲದ ವಿವರಗಳೊಂದಿಗೆ ಆಧುನಿಕ ಕಾಲದ ಸ್ಥಿತಿಗತಿಗಳ ವಿವರದ ವರ್ಣನೆಗಳನ್ನೊಳಗೊಂಡಿರುವುದು ಸಾಹಿತ್ಯಾಸಕ್ತರ ಗಮನ ಸೆಳೆಯುವಂತಿದೆ. ಕನ್ನಡದಲ್ಲಿಯೂ ಹೊಸ ಹೊಸ ವೃತ್ತಗಳನ್ನು ರಚಿಸಬಹುದೆಂದು ತೋರಿಸಿಕೊಟ್ಟಿದ್ದಾರೆ. ಕುಮಾರನಿಜಗುಣರು ತಾವು ರಚಿಸಿರುವ ನೂತನ ವೃತ್ತಗಳಿಗೆ ಹೆಸರನ್ನು ಸಮಯಸ್ಫೂರ್ತಿಗೆ, ಭಾವಕ್ಕೆ ತಕ್ಕಂತೆ ಸೂಚಿಸಿದ್ದಾರೆ. ವೈವಿಧ್ಯಮಯವಾದ ಒಂದುನೂರು ವೃತ್ತಗಳನ್ನ ಆಕರ್ಷಕವಾದ ಶಿರ್ಷಿಕೆಯಡಿಯಲ್ಲಿ ರಚಿಸಿರುವ ಗಣಾಕ್ಷರವೃತ್ತಶತಕದ ಪ್ರತಿಯೊಂದು ವೃತ್ತವೂ ಯಾವ ಛಂದಸ್ಸಿನ ಎಷ್ಟನೇ ವೃತ್ತವೆಂಬುದನ್ನ ಉದ್ದಿಷ್ಟಪ್ರತ್ಯಯದ ಪ್ರಕಾರ ಲೆಕ್ಕಹಾಕಿ ಕೊಟ್ಟಿದ್ದಾರೆ. ಇವರು ಛಂದೋಲಾಕ್ಷಣಿಕರ ಮಾರ್ಗದಲ್ಲಿ ನಡೆದು ಹೊಸ ಬಗೆಯ ವೃತ್ತಗಳನ್ನು ರಚಿಸಿ ಅರ್ವಾಚೀನ ಕಾಲದಲ್ಲಿಯೂ ಇಂತಹ ರಚನೆಗಳನ್ನ ಮಾಡಲು ಸಾಧ್ಯ ಎಂದು ತೋರಿಸಿದ್ದಾರೆ. ಇವರ ಈ ಸಾಧನೆ ನಿಜಕ್ಕೂ ಅರ್ವಾಚೀನರಿಗೆ ದಾರಿದೀಪವಾಗಿದೆ.

***ನಿಜಗುಣ ಸ್ತೋತ್ರಮಾಲೆ:*** ಇದು ತಿಳಿಯಾದ ಕನ್ನಡ ಪದ್ಯಗಳಲ್ಲಿ, ಸರಳವಾದ ಸ್ತೋತ್ರಗಳ ಮೂಲಕ, ಕನ್ನಡ ಛಂದಸ್ಸಿನ ವಿವಿಧ ವೃತ್ತಗಳಲ್ಲಿ ಹೆಣೆಯಲ್ಪಟ್ಟಿರುವ ಸ್ತೋತ್ರ ಕೃತಿಯಾಗಿದೆ. ಇದರಲ್ಲಿ 17 ವಿಷಯಗಳಿದ್ದು, 1–15 ನಿಜಗುಣಶಿವಯೋಗಿಗಳನ್ನು ಕುರಿತ ಸ್ತುತಿಗಳನ್ನು ಒಳಗೊಂಡಿದೆ. ಹದಿನಾರನೆಯದು ನಿಜಗುಣರನ್ನು ಪ್ರಾತಃ ಕಾಲದಲ್ಲಿ ಎಬ್ಬಿಸುವ ಸುಪ್ರಭಾತ ಪದ್ಯಗಳನ್ನು ಹೊಂದಿದೆ. ಹದಿನೇಳನೆಯದು ಅವರ ಮಹಿಮಾತಿಶಯಗಳನ್ನು ಹೇಳಿ ನಮಿಸುವ ಅಷ್ಟೋತ್ತರ ಶತನಾಮಾವಳಿಯನ್ನೊಂದಿದೆ. ಇಲ್ಲಿನ ಸ್ತುತಿಗಳು ಗೇಯ ಗುಣಗಳನ್ನು ಹೊಂದಿದ್ದು, ಹಾಡಲು ಯೋಗ್ಯವಾಗಿವೆ. ಇಲ್ಲಿನ ಒಂದೊಂದು ಕವಿತೆ ಅಥವಾ ಪದಗುಚ್ಛಗಳು ಬೇರೆ ಬೇರೆ ವಿಷಯವನ್ನು ಹೇಳುವ ಪ್ರತ್ಯೇಕ ಕವಿತೆಯಾಗಿದೆ. ಪ್ರಬಂಧಕಾವ್ಯದಂತೆ ಒಂದೇ ವಿಷಯವನ್ನು ಪ್ರತಿಪಾದಿಸುವುದಿಲ್ಲ ಹಾಗಾಗಿ ಈ ಕವಿತಾಪದ್ಯಗಳು ಮುಕ್ತಕಗಳಂತೆ ಬೇರೆ ಬೇರೆಯಾಗಿದ್ದು ಬೇರೆ ಬೇರೆ ಕನ್ನಡ ವೃತ್ತಗಳಿಂದ ರಚಿತವಾಗಿವೆ. ವಿಶೇಷವಾಗಿ ಪಲ್ಲವಿ ಅನುಪಲ್ಲವಿ ವಿವರಣೆಗಳಿದ್ದು ಸಂಗೀತದ ರಾಗತಾಳ ಲಯಗಳಿಗೆ ಅನುಗುಣವಾಗಿ ಹಾಡಲು ಯೋಗ್ಯವಾದ ಗೇಯಗುಣವನ್ನೊಂದಿದೆ. ಸಾಮಾನ್ಯನೂ ಸಹ ಬಾಯಿಪಾಠ ಮಾಡಿ ಹಾಡುವುದಕ್ಕೆ ಅನುಕೂಲವಾಗಿದೆ. ಕುಮಾರನಿಜಗುಣರ ಕವಿತಾಪದ್ಯಗಳು ಸರಳವೂ ಸುಂದರವೂ ಭಾವಗರ್ಭಿತವೂ ಅಲಂಕಾರಯುತವೂ ದೋಷರಹಿತವೂ ಗುಣಯುತವೂ ಆಗಿದ್ದು ಕನ್ನಡದ ಜನತೆಗೆ ಸುಲಭವಾಗಿ ಅರ್ಥವಾಗುವಂತಿದೆ.

**ಕುಮಾರನಿಜಗುಣರ ಗದ್ಯ ಮತ್ತು ಇತರೆ ಕೃತಿಗಳು**

ಶ್ರೀ ಕುಮಾರ ನಿಜಗುಣರು ಮೂಲತಃ ಕವಿಗಳು. ಪದ್ಯ ರಚನೆ ಅವರಿಗೆ ಪ್ರಿಯ. ಅವರಿಗೆ ಗದ್ಯ ಅಷ್ಟೇನೂ ಇಷ್ಟವಲ್ಲ. ಹಾಗಾಗಿ ಅವರ ಗದ್ಯ ಕೃತಿಗಳು ಕಡಿಮೆ. ಅವರ ಗದ್ಯಕೃತಿಗಳು ಕಥಾಸಂಗಮ, ನಿಜಗುಣಕಥಾಮೃತ. ಮೊದಲ ಗದ್ಯ, *ಕಥಾಸಂಗಮ*ದಲ್ಲಿ 63 ಪುರಾತನರ ಕಥೆಗಳಿವೆ. ಅವರ ಆರಾಧ್ಯ ದೈವವಾದ ನಿಜಗುಣಶಿವಯೋಗಿಗಳು '*ಅರವತ್ತುಮೂವರುಪುರಾತನರ ತ್ರಿವಿದಿ*' ಎಂಬ ಕೃತಿಯನ್ನು ರಚಿಸಿದ್ದಾರೆ. ಅದರಲ್ಲಿ ಕನ್ನಡ ಛಂದಸ್ಸಿನ ಗಾಯತ್ರಿಯಾದ ತ್ರಿಪದಿಯಲ್ಲಿ ಅತ್ಯಂತ ಸಂಕ್ಷಿಪ್ತವಾಗಿ ಒಂದೊಂದು ತ್ರಿಪದಿಯಲ್ಲಿ ಒಬ್ಬೊಬ್ಬ ಶಿವಭಕ್ತರ ಕಥೆಯನ್ನು ಹೇಳಿದ್ದಾರೆ. ಅದನ್ನು ಓದುವವರಿಗೆ ಪೂರ್ಣ ಕಥೆ ತಿಳಿದಿರಲೆಂದು ಕುಮಾರನಿಜಗುಣರು ಆ 63 ಕಥೆಗಳನ್ನು ಗದ್ಯದಲ್ಲಿ ಹೇಳಿದ್ದಾರೆ. ಅವರ ಗದ್ಯ ಸುಂದರವೂ, ಸುಲಲಿತವೂ ಆಗಿವೆ. ತಮಿಳುನಾಡಿನ ಆಳ್ವಾರರು ವಿಷ್ಣುಭಕ್ತಿಯನ್ನೂ, ನಾಯನ್ಮಾರರು ಶೈವಭಕ್ತಿಯನ್ನೂ ಬೆಳಗಿದರು. ಸುಮಾರು 12 ನೇ ಶತಮಾನದಲ್ಲಿ ಶೇಕ್ಕಿಳಾರ್ ಎಂಬ ತಮಿಳುಕವಿ ಈ ಪುರಾಣಪುರುಷರನ್ನು ಕುರಿತು **"ಪೆರಿಯಪುರಾಣಂ"** ಎಂಬ ಮಹಾಕಾವ್ಯವನ್ನು ಬರೆದನು. ತಮಿಳುನಾಡಿನ ಭಕ್ತಿಗೆ ಆಳ್ವಾರರು ಹಾಗೂ ನಾಯನ್ಮಾರರ ಕಾಲದಲ್ಲಿ ಹೆಸರು ಪಡೆದಂತೆ ಕರ್ನಾಟಕವು 12 ನೇಶತಮಾನದ ಶಿವಶರಣರ ಕಾಲದಲ್ಲಿ ಪ್ರಖ್ಯಾತಿ ಪಡೆಯಿತು. ಈ ಪುರಾತನರು ಶಿವಶರಣರಿಗೆ ಒಂದು ರೀತಿಯಲ್ಲಿ ಆದರ್ಶರಾದರು. ಅವರ ಜಂಗಮಭಕ್ತಿಗೆ ಮಾರುಹೋದ ಶರಣರು ಅವರನ್ನು ಕೊಂಡಾಡಿದರು. ಬಸವಣ್ಣರಾದಿಯಾಗಿ ಎಲ್ಲಾ ಶರಣಕವಿಗಳು ತುಂಬಾ ಮೆಚ್ಚಿದರು. ತಮ್ಮ ವಚನಗಳಲ್ಲಿ ಅವರನ್ನು ಉದಾಹರಿಸಿದರು.

***ನಿಜಗುಣಕಥಾಮೃತ:*** ಈ ಕೃತಿಯಲ್ಲಿ ನಿಜಗುಣರ ಕಥೆಯನ್ನು ಹರಿಕಥಾರೂಪದಲ್ಲಿ ಹೇಳಿದ್ದಾರೆ. ನಡುನಡುವೆ ಪದ್ಯಗಳನ್ನು ಸೇರಿಸಿದ್ದಾರೆ. ನಿಜಗುಣರ ಬಗೆಗೆ ಎಚ್. ತಿಪ್ಪೇರುದ್ರಸ್ವಾಮಿಯವರು ***"ಜ್ಯೋತಿಬೆಳಗುತಿದೆ"*** ಎಂಬ ನಾಟಕ ಬರೆದಿದ್ದಾರೆ. ಶ್ರೀಮತಿ ಶಾಂತಲಾಯಡ್ರಾವಿಯವರು ***"ಜಾಣರದೇವ"*** ಎಂಬ ಕಾದಂಬರಿ ಬರೆದಿದ್ದಾರೆ. ಇವರ ಈ ಕೃತಿ ಹರಿಕಥೆ ಮಾಡುವ ರೀತಿಯಲ್ಲಿದೆ. ಶ್ರೀಮನ್ನಿಜಗುಣರ ಹುಟ್ಟು, ಬಾಲ್ಯ, ವಿದ್ಯಾಭ್ಯಾಸ ಇತ್ಯಾದಿ ವಿಚಾರಗಳನ್ನ ಹರಿಕಥೆ ರೂಪದಲ್ಲಿ ರಚಿಸಿದ್ದಾರೆ. ಹಾಗೂ ಶಿವಸ್ವರೂಪಿ ಶ್ರೀ ಶಂಭುಲಿಂಗನ ಆಶೀರ್ವಾದ,ಕೃಪೆ ಶ್ರೀಮನ್ನಿಜಗುಣರ ಮೇಲೆ ಹೇಗೆ ಉಂಟಾಯಿತು ಎಂಬುದನ್ನು ರಸವತ್ತಾಗಿ ಕಾವ್ಯಮಯವಾಗಿ ಚಿತ್ರಿಸಿದ್ದಾರೆ. ಈ ಗದ್ಯ ಕೃತಿಗಳಲ್ಲದೇ ಅವರು *ಕೈವಲ್ಯ ಕೌಸ್ತುಭ* ಎನ್ನುವ ಒಂದು ಲೇಖನ ಸಂಪುಟವನ್ನು ಸಂಪಾದಿಸಿದ್ದಾರೆ. ಅದರಲ್ಲಿ ನಿಜಗುಣರ ಸಾಹಿತ್ಯದ ಬಗ್ಗೆ ಸುಮಾರು 30 ಜನ ವಿದ್ವಾಂಸರು ಬರೆದಿರುವ ಲೇಖನಗಳಿವೆ. ಅಲ್ಲಿನ ವಿಷಯ ವಿಂಗಡಣೆ, ಲೇಖನಗಳ ಶೀರ್ಷಿಕೆ, ಪರಿಕಲ್ಪನೆ ಮೂಲತಃ ಸಂಪಾದಕರಾದ ಕುಮಾರನಿಜಗುಣರದ್ದೇ ಆಗಿದೆ. ಇದಲ್ಲದೆ ನಿಜಗುಣಶಿವಯೋಗಿಗಳ *ಕೈವಲ್ಯಪದ್ಧತಿ* ಕೃತಿಯನ್ನು ಸಂಪಾದಿಸಿ ಪ್ರಕಟಿಸಿದ್ದಾರೆ. ಹೀಗೆ ಕುಮಾರನಿಜಗುಣರು ಹಲವು ವಿಶೇಷವಾದ ಕೃತಿಗಳನ್ನು ಕನ್ನಡ ಸಾರಸ್ವತಲೋಕಕ್ಕೆ ನೀಡಿದ್ದಾರೆ.